<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರವಾಗಿಃ ಶ್ರೀ ಡಿ.ಜೆ.ಆರ್., ವಕೀಲರಿಂದಃ</u>

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದು ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ದಿಃ 14.10.1992 ರ ನೊಂದಾಯಿತ ಪಾಲು ವಿಭಾಗ ಪತ್ರ ಹಾಜರುಪಡಿಸಿದ್ದು ಅದನ್ನು ನಿಪಿಃ 1 ಅಂತ ಗುರುತಿಸಲಾಯಿತು. ದಿಃ 26.04.2002 ರ ನೊಂದಾಯಿತ ಕ್ರಯಪತ್ರ ಹಾಜರುಪಡಿಸಿದ್ದು ಅದನ್ನು ನಿಪಿಃ 2 ಅಂತ ಗುರುತಿಸಲಾಯಿತು. ಜಿಲ್ಲಾಧಿಕಾರಿ ನ್ಯಾಯಾಲಯ, ಚಿತ್ರದುರ್ಗ ರವರು ಆರ್.ಎ.(09/2013-14) ರ ಆದೇಶದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 3 ಅಂತ ಗುರುತಿಸಲಾಯಿತು. ಎಂ.ಆರ್. ನಂ. 03/1992-93 ರ ಮ್ಯುಟೇಶನ್ ರಿಜಿಸ್ಟರಿನ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 4 ಅಂತ, ಎಂ.ಆರ್. ನಂ. 02/2002-03 ರ ಮ್ಯುಟೇಶನ್ ?ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 5 ಅಂತ ಗುರುತಿಸಲಾಯಿತು. ಸೋಮುಗುದ್ದು ಗ್ರಾಮದ ಸರ್ವೆ ನಂ. 25/1 ರ 4 ಪುಟಗಳನ್ನೊಳಗೊಂಡ ಒಂದು ಪಹಣಿ ಪತ್ರಿಕೆಯ ಹಾಜರುಪಡಿಸಿದ್ದು ಅದನ್ನು ನಿಪಿಃ 6 ಅಂತ, ಸರ್ವೆ ನಂ. 25/ಪಿ ಕ್ಕೆ ಸಂಬಂಧಿಸಿದ ಒಂದು ಕೈಬರಹದ ಪಹಣಿ ಪತ್ರಿಕೆ ಹಾಜರುಪಡಿಸಿದ್ದು ಅದನ್ನು ನಿಪಿಃ 7 ಅಂತ ಗುರುತಿಸಲಾಯಿತು. ಸೋಮುಗುದ್ದು ಗ್ರಾಮದ ಸರ್ವೆ ನಂ. 25/ಪಿ-2, ಸರ್ವೆ ನಂ. 25/ಪಿ-7 ಕ್ಕೆ ಸಂಬಂಧಿಸಿದ ಎರಡು ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿಃ 8 ಮತ್ತು 9 ಅಂತ ಗುರುತಿಸಲಾಯಿತು.

ಎರಡು ರಸೀದಿ ಪಟ್ಟಾ ಹಾಜರುಪಡಿಸಿದ್ದು ಅವುಗಳನ್ನು ನಿಪಿಃ 10 ಮತ್ತು 11 ಅಂತ ಗುರುತಿಸಲಾಯಿತು.

(ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್?ಸಿ., ಚಳ್ಳಕೆರೆ.